ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ : 252/2022**

**ತೆರೆದ ನ್ಯಾಯಾಲಯದಲ್ಲಿ ವಿಸಿ ಮೂಲಕ ವಿಚಾರಣೆಃ**

**ಫ್ರಾಸಾ- 18 ಚಾಸಾ-22**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಡಾಃ ರಾಧಾ ಎಸ್ |
| ತಂದೆಯ ಹೆಸರುಃ | : | ಶ್ರೀನಿವಾಸ್ |
| ವಯಸ್ಸುಃ | : | 50 ವರ್ಷ |
| ಉದ್ಯೋಗಃ | : | ಸಹಾಯಕ ನಿರ್ದೇಶಕರು |
| ವಾಸ | : | ಮೈಸೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:23-09-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು ನವೆಂಬರ್ 2012ರಿಂದ ಇಲ್ಲಿಯವರೆಗೂ ನಾನು ಆರ್.ಎಫ್.ಎಸ್.ಎಲ್. ಮೈಸೂರಿನಲ್ಲಿ ವಿವಿಧಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ..

2.ದಿಃ16-6-2022ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆಲೂರು ಪೊಲೀಸ್ ಠಾಣೆಯ ಪೇದೆ ಸಂಖ್ಯೆ79ರವರು 9 ಸೀಲಾದ ಪ್ಯಾಕುಗಳನ್ನು ಮಾದರಿ ಸೀಲಿನೊಂದಿಗೆ ತಂದು ಕಛೇರಿಯ ಸ್ವಾಗತ ವಿಭಾಗದಲ್ಲಿ ನೀಡಿದ್ದನ್ನು ನಮ್ಮ ಸ್ವಾಗತ ವಿಭಾಗದವರು ಅದನ್ನು ನನಗೆ ಕಳುಹಿಸಿಕೊಟ್ಟಿದ್ದರು.

3.ಸೀಲಾದ 9 ವಸ್ತುಗಳನ್ನು ಪರಿಶೀಲಿಸಿದಾಗ ಅದರ ಮೇಲಿದ್ದ ಸೀಲು ಮಾದರಿ ಸೀಲಿನೊಂದಿಗೆ ಹೋಲಿಕೆಯಾಗುತ್ತಿತ್ತು. ಸದರಿ ವಸ್ತುಗಳನ್ನು ತೆರೆದು ನೋಡಿದಾಗ ವಸ್ತುಸಂಖ್ಯೆ 1ರಲ್ಲಿ ಒಂದು ಲುಂಗಿ, ವಸ್ತುಸಂಖ್ಯೆ2ರಲ್ಲಿ ಒಂದು ಶರ್ಟ್, ವಸ್ತುಸಂಖ್ಯೆ3ರಲ್ಲಿ ಒಂದು ಕಾಚಾ, ವಸ್ತುಸಂಖ್ಯೆ4ರಲ್ಲಿ

ಮಾದರಿ ರಕ್ತ, ವಸ್ತುಸಂಖ್ಯೆ 5ರಲ್ಲಿ ಒಂದು ಟೀಶರ್ಟ್, ವಸ್ತುಸಂಖ್ಯೆ 6 ರಲ್ಲಿ ಒಂದು ಸುತ್ತಿಗೆ, ವಸ್ತುಸಂಖ್ಯೆ 7 ರಲ್ಲಿ ಒಂದು ದೊಣ್ಣೆ ವಸ್ತುಸಂಖ್ಯೆ 8 ರಲ್ಲಿ ಮಣ್ಣು, ವಸ್ತುಸಂಖ್ಯೆ 9ರಲ್ಲಿ ಮಾದರಿ ಮಣ್ಣು ಇತ್ತು. ಈ ವಸ್ತುಗಳಿಗೆ ತನಿಖಾಧಿಕಾರಿಯು ವಸ್ತುಸಂಖ್ಯೆ 1 ರಿಂದ 3, 8, 9, 10, 11, 12,13 ಎಂದು ಗುರುತಿಸಿರುತ್ತಾರೆ. ಸದರಿ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ತನಿಖಾಧಿಕಾರಿ ಗುರುತಿಸಿದ ವಸ್ತುಸಂಖ್ಯೆ 2, 3, 10 ರಿಂದ 12 ರಲ್ಲಿ ರಕ್ತದ ಕಲೆಗಳಿದ್ದವು, ಅದು ಮಾನವನ ರಕ್ತವಾಗಿತ್ತು. ವಸ್ತುಸಂಖ್ಯೆ 1, 9, 13 ರಲ್ಲಿ ಯಾವುದೇ ರಕ್ತದ ಕಲೆಗಳಿರಲಿಲ್ಲ, ವಸ್ತುಸಂಖ್ಯೆ 10ರಲ್ಲಿರದ ರಕ್ತದ ಕಲೆ ಸೆರಾಲಜಿ ಪರೀಕ್ಷೆಗೆ ಸಾಕಾಗಿರಲಿಲ್ಲ. ವಸ್ತುಸಂಖ್ಯೆ 2, 3, 12, 11 ರಲ್ಲಿದ್ದ ರಕ್ತದ ಕಲೆ ಎ ಗುಂಪಿಗೆ ಸೇರಿತ್ತು. ವಸ್ತುಸಂಖ್ಯೆ 8ರಲ್ಲಿದ್ದ ಮಾದರಿ ರಕ್ತವು ಮನುಷ್ಯನ ಎ ಗುಂಪಿನ ರಕ್ತವಾಗಿತ್ತು. ಈ ಎಲ್ಲಾ ವಿಚಾರವನ್ನು ನನ್ನ ಅಭಿಪ್ರಾಯದೊಂದಿಗೆ ನಮೂದಿಸಿ ನಿಪಿ-43 ರಂತೆ ವರದಿ ನೀಡಿರುತ್ತೇನೆ. ಅದಕ್ಕೆ ನಾನು ಡಿಜಿಟಲ್ ಸಹಿ ಹಾಕಿರುತ್ತೇನೆ. ಈ ಎಲ್ಲಾ ವಸ್ತುಗಳನ್ನು ಮತ್ತೊಮ್ಮೆ ಮರುಪ್ಯಾಕು ಮಾಡಿ ಮಾದರಿ ಸೀಲಿನೊಂದಿಗೆ ಸಂಬಂಧಪಟ್ಟ ಠಾಣೆಗೆ ಕಳುಹಿಸಿರುತ್ತೇನೆ. ನನಗೆ ಕಳುಹಿಸಿಕೊಟ್ಟ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳು ನ್ಯಾಯಾಲಯದ ಮುಂದಿರುವ ಎಂ.ಎ.1 ರಿಂದ 9 ಆಗಿರುತ್ತವೆ. ಮಾದರಿ ಸೀಲನ್ನು ವಾಪಸ್ ಕೊಟ್ಟ ಮುದ್ದೆಮಾಲುಗಳ ಜೊತೆ ಕೊಟ್ಟಿರುತ್ತೇನೆ. ವರದಿ ಜೊತೆ ಕೊಡುವುದಿಲ್ಲ ಕಾರಣ ವರದಿಯನ್ನು ಆನ್ಲೈನ್ ಮೂಲಕ ನೀಡಿರುತ್ತೇವೆ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಹೆಚ್ ಜೆ ಆರ್ ವಕೀಲರಿಂದಃ**

ಎಂ.ಓ.1 ರಿಂದ 9ನ್ನು ಯಾವ ದಿನಾಂಕದಂದು ಪೊಲೀಸರು ವಶಪಡಿಸಿಕೊಂಡಿದ್ದರು, ಯಾವ ರೀತಿಯಲ್ಲಿ ಅದನ್ನು ಸಂರಕ್ಷಿಸಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ವಶಪಡಿಸಿಕೊಂಡ ವಸ್ತುಗಳನ್ನು ಸರಿಯಾಗಿ ಸಂರಕ್ಷಿಸದೆ ಗಾಳಿ ಬೆಳಕು ಇತ್ಯಾದಿಗೆ ತೆರೆದಿಟ್ಟಲ್ಲಿ ಪರೀಕ್ಷೆಗೆ ಯೋಗ್ಯವಲ್ಲ ಎಂದರೆ ಸಾಕ್ಷಿಯು ಸರಿಯಾಗಿ ಸಂರಕ್ಷಿಸದಿದ್ದಲ್ಲಿ ಸಾಧ್ಯವಿರುತ್ತದೆ ಎನ್ನುತ್ತಾರೆ. ನನಗೆ ಕಳುಹಿಸಿದ ವಸ್ತುಗಳು ಪರೀಕ್ಷೆಗೆ ಯೋಗ್ಯವಲ್ಲದಿದ್ದರೂ ಸಹ ಪೊಲೀಸರ ಕೋರಿಕೆ ಮೇರೆಗೆ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**